ಕುಳಿತುಕೊಂಡರು. ಮಂಡನ ಮಿಶ್ರ ಸ್ವಲ್ಪ ದೂರದಲ್ಲಿ ಕುಳಿತುಕೊಂಡರು. ಕೆಲವು ಕ್ಷಣಗಳು ಅಂಗಳದಲ್ಲಿ ಒಂದು ಬಗೆಯ ನೀರವತೆ ಆವರಿಸಿತ್ತು. ಶಂಕರ ಮೌನವನ್ನು ಕೆಡವಿ ಸರಸವಾಣಿಯ ಕಡೆ ನೋಟ ಬೀರಿ ಮಾತನಾಡಲು ಪ್ರಾರಂಭಿಸಿದರು. "ನಾನು ಹಿಂತಿರುಗಿ ಬರುವುದಿಲ್ಲ ಎಂದಲ್ಲವೇ ನೀವೆಲ್ಲರೂ ಅಂದುಕೊಂಡಿರಿ? ಆದರೆ ಕಾಲದ ಕಟ್ಟಳೆಯನ್ನು ಯಾರಿಂದ ಗೆಲ್ಲಲು ಸಾಧ್ಯ?"

ಸರಸವಾಣಿ ತನ್ನ ಮನಸ್ಸಿನ ಯಾವ ಚಂಚಲತೆಗಳನ್ನು ತೋರ್ಪಡಿಸದೆ, ಮೃದುವಾಗಿ ಅವರನ್ನು ನೋಡಿ ಮುಗುಳ್ನಕ್ಕಳು.

ಶಂಕರ ಮುಂದುವರೆಸಿದರು. "ಸರಸವಾಣಿ ! ನೀನು ಕೇಳಿದ ಆ ಪ್ರಶ್ನೆಗಳಿಗೆ ಉತ್ತರಗಳನ್ನು ನಾನು ಅನುಭವಪೂರ್ವಕವಾಗಿ ಹುಡುಕಿ ಅರಿತು ಬಂದಿದ್ದೇನೆ. ಹೇಳುತ್ತೇನೆ, ಕೇಳು..." ಎಂದವರು, ಹಿಂದೆ ಅವಳು ಕೇಳಿದ್ದ, ಕಾಮಶಾಸ್ತ್ರದ ಬಗೆಗಿನ ಶೃಂಗಾರರಸದ ವಿವರಣೆಗಳನ್ನು ಕೂಲಂಕಷವಾಗಿ, ಒಂದು ಉಪನ್ಯಾಸದಂತೆ ವಿವರಿಸುತ್ತ ಹೋದರು.

ಸರಸವಾಣಿ ಕಣ್ಣನ್ನು ನೆಲಕ್ಕೆ ತಗ್ಗಿಸಿ ಕುಳಿತಿದ್ದಳು. ಶಂಕರರು ಹೇಳಿ ಮುಗಿಸಿದ ಮೇಲೆ ಅವಳು ತಲೆ ಎತ್ತಿ ಅವರನ್ನು ನೋಡಿದಳು.

"ಇನ್ನೂ ಏನಾದರು ಪ್ರಶ್ನೆಗಳಿವೆಯೇ?" ಎಂದು ಮೆಲ್ಲಗೆ ನಗುತ್ತಾ ಅವಳನ್ನು ಕೇಳಿದರು.

ಅವಳು ಹೇಳಿದಳು: "ಒಂದೇ ಒಂದು ಪ್ರಶ್ನೆ ಇದೆ, ಯುವ ಯೋಗಿಯೇ! ಆದರೆ, ಇವು ನಮ್ಮ ವಾದದೊಂದಿಗೋ, ವಾದದ ನಿಬಂಧನೆಗಳಿಗೋ ಸಂಬಂಧವಿಲ್ಲದ್ದು. ನಾನು ಕೇಳಿದ ಪ್ರಶ್ನೆಗಳಿಗೆ ನೀವು ಉತ್ತರವನ್ನು ಹುಡುಕಿಕೊಂಡು ತಂದಿರುವುದು ಮಾತ್ರವೇ ನನಗೆ ಮುಖ್ಯವಾಗಬೇಕೆ ಹೊರತು, ಈ ಉತ್ತರಗಳನ್ನು ನೀವು ಹೇಗೆ ಗಳಿಸಿದಿರಿ ಎಂಬುದರ ಬಗ್ಗೆ ನನಗೆ ಅಕ್ಕರೆ ಇರಬಾರದು. ಆದರೂ ನನ್ನ ಕುತೂಹಲ ಇದಕ್ಕೆ ಅಡ್ಡಿಯಾಗಿದೆ. ಆದ್ದರಿಂದ ಕೇಳದೆ ಇರಲು ಆಗುತ್ತಿಲ್ಲ. ಸನ್ಯಾಸಿಯಾದ ನಿಮಗೆ, ನಿಮ್ಮ ಸನ್ಯಾಸಕ್ಕೆ ಯಾವ ಭಂಗವೂ ಬಾರದಂತೆ ಈ ಅನುಭವ ಹೇಗೆ ಸಾಧ್ಯವಾಯಿತು ಎಂದು ನಾನು ತಿಳಿದುಕೊಳ್ಳಲು ಬಯಸುತ್ತೇನೆ. ಈ ಪ್ರಶ್ನೆಗೆ ನೀವು ಉತ್ತರ ಹೇಳಲೇಬೇಕೆಂಬ ಕಡ್ಡಾಯವಿಲ್ಲ..."

ಶಂಕರ ಕೆಲವು ಕ್ಷಣಗಳು ಶಾಂತವಾಗಿದ್ದರು. ಅವಳ ಕಣ್ಣುಗಳನ್ನು ನೇರವಾಗಿ ಸಂಧಿಸುವುದನ್ನು ತಪ್ಪಿಸುತ್ತ ಅವರು ಮಾತನಾಡಿದರು: "ನನ್ನ ಈ ಶರೀರವನ್ನು ಎಂದಿನಂತೆ ನಾನು ಪರಿಶುದ್ಧವಾಗಿಯೇ ಇಟ್ಟಿರುವೆ. ಅದರ ಬಗ್ಗೆ ನಿಮಗೆ ಯಾವ ಸಂಶಯವೂ ಬೇಡ... ಅದು ಹೇಗೆ ಸಾಧ್ಯ ಎಂದು ನೀವು ಕೇಳಬಹುದು. ಮನಸ್ಸಿದ್ದರೆ ಮಾರ್ಗ ಉಂಟು ಅಲ್ಲವೇ? ಅನುಭವ ಜ್ಞಾನವನ್ನು ಹುಡುಕಿಕೊಂಡು ನಾನು ದಿಕ್ಕು ತೋಚದೆ ನಿಂತಿದ್ದಾಗ, ಕಾಡಿಗೆ ಬೇಟೆಯಾಡಲು ಬಂದ ಅಮರುಗ ಎಂಬ ಯುವ ರಾಜನ ಶವ ದಾರಿಯಲ್ಲಿ ಕಂಡಿತು. ಆಗ ನನಗೆ ಒಂದು ಯೋಚನೆ ಹೊಳೆಯಿತು. ಇವನ ದೇಹದ ಮೂಲಕ ಅಂತಃಪುರದ ಸ್ತ್ರೀಯರೊಂದಿಗೆ ದಾಂಪತ್ಯ ರಹಸ್ಯವನ್ನು ಅನುಭವಿಸಿ ನಾನೇಕೆ ತಿಳಿದುಕೊಳ್ಳಬಾರದು ಎಂದು ಅಂದುಕೊಂಡೆ. ನನ್ನ ದೇಹವನ್ನು ನನ್ನ ಶಿಷ್ಯರ ರಕ್ಷಣೆಯಲ್ಲಿರಿಸಿ, ನನ್ನ ತಪೋ ಬಲದಿಂದ, ಬರಿ ಆತ್ಮವಾಗಿ ನಾನು ಆ ರಾಜನ ದೇಹದೊಳಗೆ ಪ್ರವೇಶಿಸಿದೆ. ಅವನ ರಾಜ್ಯಕ್ಕೆ ಹೋಗಿ, ಅವನ ಪಟ್ಟದ ರಾಣಿಯರೊಂದಿಗೂ, ಉಳಿದ ಅಂತಃಪುರದ ಹೆಣ್ಣುಗಳೊಂದಿಗೂ ಶೃಂಗಾರರಸ ಕಲಿತೆ. ಅವರಿಗೂ ಸಂತೋಷವನ್ನು ನೀಡಿದೆ. ಒಂದು ತಿಂಗಳ ಅವಧಿ ಮುಗಿದ ಕೂಡಲೇ, ಅವನ ದೇಹವನ್ನು ತ್ಯಜಿಸಿ ನನ್ನ ಹಳೆಯ ದೇಹಕ್ಕೆ ಮರಳಿದೆ. ಆತ್ಮ, ಸುಖ ದುಃಖ ಎಂಬ ಯಾವ